ಪ್ರೇಮಾನಂದರೇ ವಿನಂತಿಸಿಕೊಂಡರೂ ಒಪ್ಪುತ್ತಿರಲಿಲ್ಲ. ಪ್ರೇಮಾನಂದರು ವೀರೇಂದ್ರನಾಥನಿಗೆ, 'ಇದು ನಮ್ಮಿಂದ ಆಗುವ ಕಾರ್ಯವಲ್ಲ. ನೀನು ಉದ್ಬೋಧನಕ್ಕೆ ಹೋಗಿ, ಶ್ರೀಮಾತೆಯವರನ್ನು ಬೇಡಿಕೋ. ಶ್ರೀಮಾತೆ ಅನುಮತಿ ಕೊಟ್ಟರೆ ಕಾರ್ಯ ಸಫಲವಾಗುತ್ತದೆ' ಎಂದರು. ಪ್ರೇಮಾನಂದರು ವೀರೇಂದ್ರನಾಥನನ್ನು ಕೃಷ್ಣಲಾಲ ಮಹಾರಾಜರ ಜೊತೆ 'ಉದ್ಬೋಧನ'ಕ್ಕೆ ಕಳುಹಿಸಿಕೊಟ್ಟರು.

ಕೃಷ್ಣಲಾಲ್ ಮಹಾರಾಜರು ಶ್ರೀಮಾತೆಗೆ, ''ಅಮ್ಮ, ಇವರು ರಾಜಾ ಮಹಾರಾಜರ ಶಿಷ್ಯ. ತನ್ನ ಗುರುಗಳನ್ನು ಢಾಕಾಗೆ ಕರೆದುಕೊಂಡು ಹೋಗಬೇಕೆಂದು ಇಲ್ಲಿಗೆ ಬಂದಿದ್ದಾರೆ. ಆದರೆ ಮಹಾರಾಜರು ಏನು ಮಾಡಿದರೂ ಹೋಗಲು ಒಪ್ಪುತ್ತಿಲ್ಲ'' ಎಂದರು. ಅದಕ್ಕೆ ಶ್ರೀಮಾತೆ, ''ಹುಡುಗ ಬಂದಿದ್ದಾನೆ, ಕರೆದುಕೊಂಡು ಹೋಗಲು. ಹೋಗಬಾರದೆ? ಆದರೆ ನೋಡು, ತುಂಬಾ ಜಾಗ್ರತೆಯಾಗಿ ಕರೆದುಕೊಂಡು ಹೋಗು'' ಎಂದರು. ವೀರೇಂದ್ರನಾಥರ ಕೆಲಸ ಸರಾಗವಾಯಿತು. ಶ್ರೀಮಾತೆಯವರ ಈ ಮಾತನ್ನು ಕೇಳಿ, ಮಹಾರಾಜರು ಚಕಾರವೆತ್ತದೆ ಢಾಕಾಗೆ ಹೋಗಲು ಅಣಿಯಾದರು.

ಸಂಘಜನನಿ ಶ್ರೀಮಾತೆಯವರ ಅನುಮತಿಯಿಲ್ಲದೆ ರಾಜಾ ಮಹಾರಾಜರು ಸಂಘದ ಕೆಲಸವಾಗಲಿ, ತನ್ನ ವೈಯಕ್ತಿಕ ಕೆಲಸವಾಗಲಿ, ಯಾವುದನ್ನೂ ಮಾಡುತ್ತಿರಲಿಲ್ಲ. ೧೮೮೯ರ ಅಂತ್ಯಭಾಗದಲ್ಲಿ ಬ್ರಹ್ಮಾನಂದರಿಗೆ ತಪಸ್ಸು ಮಾಡಲು ಹೋಗಬೇಕೆಂದು ಪ್ರಬಲವಾದ ಇಚ್ಛೆಯುಂಟಾಯಿತು. ಆಗ ಶ್ರೀಮಾತೆಯವರು ಜಯರಾಂಬಾಟಿಯಲ್ಲಿದ್ದರು. ಬ್ರಹ್ಮಾನಂದಜಿ ತನ್ನ ಇಚ್ಛೆಯನ್ನು ಶ್ರೀಮಾತೆಗೆ ತಿಳಿಸಿ, ಅವರ ಅನುಮತಿಗಾಗಿ ಕೇಳಿಕೊಂಡರು. ಈ ಬಗ್ಗೆ ಶ್ರೀಮಾತೆಯವರು ಬಲರಾಮಬಾಬುವಿಗೆ ಪತ್ರ ಬರೆದರು: ''ರಾಖಾಲ ಪಶ್ಚಿಮಕ್ಕೆ ಹೋಗಬೇಕೆಂದಿದ್ದಾನೆಂದು ಕೇಳಿದೆ. ಹೋದ ಸಲ ಪುರಿಗೆ ಹೋಗಿ ಶೀತದಿಂದ ತುಂಬಾ ಕಷ್ಟಪಟ್ಟಿದ್ದ. ಈ ಸಲ ಫಾಲ್ಗುಣ ತಿಂಗಳ ಕೊನೆಗೆ ಹೋದರೆ ಒಳಿತೆಂದು ಕಾಣುತ್ತದೆ. ಆಗ ಚಳಿ ಕಡಿಮೆಯಾಗುತ್ತದೆ. ಆದರೆ ಹೋಗಲೇಬೇಕೆಂದಿದ್ದರೆ, ನಾನೇನು ಹೇಳಬಲ್ಲೆ?'' ಶ್ರೀಮಾತೆಯ ಆದೇಶವನ್ನು ಶಿರಸಾವಹಿಸಿ, ವಿಳಂಬವಿಲ್ಲದೆ ಬ್ರಹ್ಮಾನಂದರು ತಪಸ್ಸಿಗೆ ಹೊರಟರು.

ಬಹುಶಃ ೧೮೯೮ರಲ್ಲಿರಬೇಕು, ಒಬ್ಬ ಗುರುಭಾಯಿಯ ಆರೋಗ್ಯ ಮತ್ತು ಅಧ್ಯಾತ್ಮ ಜೀವನದ ಬಗ್ಗೆ ಸ್ವಾಮಿ ಬ್ರಹ್ಮಾನಂದರು, ಅವರಿಗೆ ಬರೆಯಬೇಕಿತ್ತು. ಈ ಬಗ್ಗೆ ಯೋಗಾನಂದರ ಹತ್ತಿರ ವಿಮರ್ಶೆಮಾಡಿ, ಕಾಗದ ಬರೆದು ಅನುಮೋದನೆಗಾಗಿ ಶ್ರೀಮಾತೆಯವರ ಹತ್ತಿರ ಕಳುಹಿಸಿಕೊಟ್ಟರು. ಪತ್ರವನ್ನು ಓದಿಸಿದ ನಂತರ ಶ್ರೀಮಾತೆಯವರು ಹೇಳಿದರು, 'ರಾಖಾಲನು ಸರಿಯಾಗಿಯೇ ಬರೆದಿದ್ದಾನೆ. ನನ್ನ ಮನಸ್ಸಿನಲ್ಲಿದ್ದ ಒಕ್ಕಣೆಯನ್ನೇ ಬರೆದಿದ್ದಾನೆ' ಎಂದರು. ಅನಂತರ ಆ ಪತ್ರವನ್ನು ಬ್ರಹ್ಮಾನಂದರು, ಆ ಗುರುಭಾಯಿಯ ಹೆಸರಿನಲ್ಲಿ ಅಂಚೆಗೆ ಹಾಕಿದರು.

ಶ್ರೀಮಾತೆಯವರು ಬ್ರಹ್ಮಾನಂದರ ಆರಾಧ್ಯದೇವತೆಯೂ ಆಶ್ರಯದಾತೆಯೂ ಆಗಿದ್ದರು. ಕ್ರಿ.ಶ. ೧೯೨೦ರಲ್ಲಿ ಸ್ವಾಮಿ ಬ್ರಹ್ಮಾನಂದರು ಭುವನೇಶ್ವರದಲ್ಲಿದ್ದರು. ಜುಲಾಯಿ ೨೧ರಂದು, ಮಂಗಳವಾರ ರಾತ್ರಿ ಒಂದೂವರೆ ಘಂಟೆಗೆ ಶ್ರೀಮಾತೆಯವರು ತಮ್ಮ ಭೌತಿಕ ಜೀವನದ ಲೀಲೆಯನ್ನು ಸಮಾಪ್ತಿ ಮಾಡಿದರು. ಆ ದಿನ ರಾತ್ರಿ ಒಂದು ಘಂಟೆಗೆ ಸೇವಕ ನೋಡುವಾಗ ಸ್ವಾಮಿ ಬ್ರಹ್ಮಾನಂದರು ಒಂದು ಶಾಲನ್ನು ಹೊದ್ದುಕೊಂಡು, ಆರಾಮಕುರ್ಚಿಯ ಮೇಲೆ ಕುಳಿತುಕೊಂಡಿದ್ದರು. ಸೇವಕ, 'ಹುಕ್ಕಾ ತಯಾರಿಸಿಕೊಡಲೆ?' ಎಂದು ಕೇಳಿದ. ಮಹಾರಾಜರು ಏನನ್ನೂ ಹೇಳದೆ ಗಂಭೀರವಾಗಿ ಕುಳಿತಿದ್ದರು. ಸೇವಕನಿಗೆ ಮಾತಾಡಲು ಧೈರ್ಯ ಸಾಲದೆ, ಕೋಣೆಯಿಂದ ಹೊರಗೆ ಬಂದ. ಮರುದಿನ ಬೆಳಿಗ್ಗೆ ಮಹಾರಾಜರು ಬೇರೆಲ್ಲಿಯೂ ವಾಯುಸಂಚಾರಕ್ಕೆ ಹೋಗದೆ, ವರಾಂಡದಲ್ಲಿಯೇ ಶತಪಥ ತಿರುಗುತ್ತಿದ್ದರು. ಅಷ್ಟರಲ್ಲಿ ಸ್ವಾಮಿ ಶಾರದಾನಂದರು ಕಳುಹಿಸಿದ ಟೆಲಿಗ್ರಾಮ್ ಬಂತು; ಹಿಂದಿನ ದಿನ ರಾತ್ರಿ ೧.೩೦ಕ್ಕೆ ಶ್ರೀಮಾತೆಯವರು ದೇಹತ್ಯಾಗ ಮಾಡಿದ್ದಾರೆ ಎಂಬ ಒಕ್ಕಣೆ ಅದರಲ್ಲಿತ್ತು. ಈ ಮಾತನ್ನು ಕೇಳಿ ಮಹಾರಾಜರಿಗೆ ಅತ್ಯಂತ ಆಘಾತವಾಯಿತು. ಅವರ ಮುಖದಲ್ಲಿ ಅವ್ಯಕ್ತವಾದ ದುಃಖ ಪ್ರಕಟವಾಯಿತು. ನೇರ ಹೋಗಿ ಸ್ವಲ್ಪ ಹೊತ್ತು ಮಲಗಿಕೊಂಡರು. ಅನಂತರ ಎದ್ದು, 'ನಾನು ಹವಿಷ್ಯಾನ್ನ ಊಟ ಮಾಡುತ್ತೇನೆ' ಎಂದರು. ಮೂರು ದಿನ ಅವರು ಮೌನವಾಗಿದ್ದರು. ಹನ್ನೆರಡು ದಿನ ಚಪ್ಪಲಿ ಧರಿಸಲಿಲ್ಲ. ಅತ್ಯಂತ ದುಃಖದಿಂದ, 'ಇಷ್ಟು ದಿನ ನಾನು ಪರ್ವತದ ನೆರಳಿನಲ್ಲಿದ್ದೆ' ಎಂದರು.

ಮಹಾರಾಜರು ಹೇಳುತ್ತಿದ್ದರು: ''ತಾಯಿಯನ್ನು ಅರಿತುಕೊಳ್ಳುವುದು ಬಹಳ ಕಷ್ಟದ ಕೆಲಸ. ಅವರು ಮುಸುಕು ಹಾಕಿಕೊಂಡು ಸಾಮಾನ್ಯ ಸ್ತ್ರೀಯಂತೆ ಇರುತ್ತಿದ್ದರು. ಅವರು ಸಾಕ್ಷಾತ್ ಜಗದಂಬೆ. ಅವರು ಯಾರೆಂದು, ಪರಮಹಂಸರು ಸ್ವತಃ ಅರಿವು ಮಾಡಿಕೊಟ್ಟಿದ್ದರಿಂದ ನಾವು ಅರಿತುಕೊಂಡಿದ್ದೆವು. ಇಲ್ಲದಿದ್ದರೆ ನಮ್ಮಿಂದಲೇ ನಾವು ಅರಿತುಕೊಳ್ಳಲು ಸಾಧ್ಯವೆ?''

ಶ್ರೀಮಾತೆ ಯಾವಾಗಲೂ ಅವಗುಂಠನವನ್ನು ಧರಿಸುತ್ತಿದ್ದರು. ಶ್ರೀರಾಮಕೃಷ್ಣರು ಮತ್ತು ಒಂದೆರಡು ವಯೋವೃದ್ಧ ಭಕ್ತರು ಬಿಟ್ಟರೆ ಅವರ ಮುಖವನ್ನು ಯಾರೂ ನೋಡಿರಲಿಲ್ಲ; ವಿವೇಕಾನಂದರು, ಬ್ರಹ್ಮಾನಂದರು ಕೂಡ ಇದಕ್ಕೆ ಹೊರತಾಗಿರಲಿಲ್ಲ. ದಕ್ಷಿಣೇಶ್ವರದ ಕೋಶಾಧಿಕಾರಿಯನ್ನೊಮ್ಮೆ ಒಬ್ಬರು, 'ಶ್ರೀಮಾತೆ ಎಲ್ಲಿರುತ್ತಾರೆ?' ಎಂದು ಕೇಳಿದರು. ಆತ ಹೇಳಿದ, 'ಅವರು ಇಲ್ಲಿದ್ದಾರಂತೆ, ಆದರೆ ನಾನು ಅವರನ್ನು ಈ ತನಕ ನೋಡಿಲ್ಲ.' ಶ್ರೀಮಾತೆ ತಮ್ಮ ಬಾಹ್ಯ ದೇಹವನ್ನು ಮುಚ್ಚಿ ಕೊಂಡಹಾಗೆ, ಅವರ ದೈವೀಶಕ್ತಿಯನ್ನೂ ಅವ್ಯಕ್ತವಾಗಿಟ್ಟುಕೊಂಡಿದ್ದರು. ಅವರ ದೈವೀಶಕ್ತಿಯನ್ನು ನಾವು ದಿನನಿತ್ಯ ಎಷ್ಟು ಸ್ಮರಣ, ಮನನ ಮತ್ತು ನಿಧಿಧ್ಯಾಸನ ಮಾಡಬಹುದೆಂದು ಹೇಳುವುದೂ ಕೂಡ ನಮ್ಮ ಶಕ್ತಿಗೆ ಮೀರಿದ್ದು. ಕ್ಷಣಕಾಲವಾದರೂ, ಈ ಅನಂತ ಶಕ್ತಿಯ ಸಾನ್ನಿಧ್ಯವನ್ನು ಸ್ಪರ್ಶಮಾಡಿ ಆನಂದವನ್ನು ಪಡೆಯಬಹುದು. ಒಂದು ಮುಹೂರ್ತವಾದರೂ ಸರಿ, ಈ ಐಶ್ವರ್ಯ ಶಕ್ತಿಯನ್ನು ಸ್ಪರ್ಶಮಾಡಿದರೆ, ಅದೇ ಪರಮಪ್ರಾಪ್ತಿ.

# ಅಮ್ಮನಿಗೊಂದು ಪತ್ರ

– ಸದಾಶಿವ ಹಿರೇಮಠ

ಆತ್ಮೀಯರಿಗೆ ಪತ್ರ ಬರೆಯುವ ಮೂಲಕ ನಮ್ಮ ಅಂತರಂಗವನ್ನು ತೋಡಿಕೊಳ್ಳುವ ಪರಿಪಾಠ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಕಾಲ್ಪನಿಕವಾಗಿಯಾದರೂ, ಪತ್ರಮುಖೇನ ತಮ್ಮ ಅಂತರಂಗವನ್ನು ಶ್ರೀಮಾತೆಯೆದುರು ನಿವೇದಿಸಿಕೊಂಡಿರುವ ಲೇಖಕರು ಧಾರವಾಡದ ನಿವಾಸಿಗಳು.

ಅಮ್ಮಾ,

ನಾನಿಂದು ಈ ಪತ್ರ ಬರೆಯುತ್ತಿರುವೆ. ನಿಜ, ನೀನಿಲ್ಲ ಇಂದು. ಆದರೆ ನೀನು ಸರ್ವವ್ಯಾಪಿ, ಭಾವಗ್ರಾಹಿ. ನನ್ನೀ ಭಾವನೆಗಳನ್ನು ನಿನ್ನೊಡನೆ ಹಂಚಿಕೊಳ್ಳಲು ಬಯಸುತ್ತಿರುವೆ. ಹೃದಯವಾಸಿ, ಅಂತರ್ಯಾಮಿ ನಿನ್ನಿಂದ ನಾವೇನನ್ನು ಮುಚ್ಚಿಡಲು ಸಾಧ್ಯ? ಅದಕ್ಕಾಗಿ ನಿನ್ನೊಡನೆ ಈ ಪತ್ರದಿಂದ ನಾನಿವನ್ನು ತೆರೆದಿಡುತ್ತಿರುವೆ.

ಈ ಮನಸ್ಸು ಅತಿ ಚಂಚಲ, ಪ್ರಚಂಡ. ಅದನ್ನು ಕಟ್ಟುವುದೆಂದರೆ, ಗಾಳಿಯನ್ನು ಕಟ್ಟಿದಷ್ಟೇ ಕಷ್ಟ. ಆದರೆ ನಿನ್ನ ನಾಮ ಜಪ, ನಿನ್ನ ಕೃಪೆ ಅದನ್ನು ಒಂದಿಷ್ಟು ಹತೋಟಿಗೆ ತಂದಿದೆ. ಆದರೆ ನಡೆವ ದಾರಿ ಇನ್ನೂ ದೂರ. ಒಳಗೆ ಅಡಗಿ ಕುಳಿತಿರುವ ವಾಸನೆಗಳ ಕಾಟ ಬೇರೆ. ಮನಸ್ಸು ಅವುಗಳ ಬಂಧು. ನಾನೆಂಬುದನ್ನು ಅಡಗಿಸಿಬಿಟ್ಟಿವೆ. ನಾನು ದೇಹವಲ್ಲ ಆತ್ಮ ಎಂಬುದನ್ನೇ ಮರೆಸಿಬಿಟ್ಟಿವೆ. ಆದರೆ ನಿನ್ನ ನಾಮವೆಂಬ ಬೇಲಿಯನ್ನು ಕಟ್ಟಲೆಳಸುತ್ತಿರುವೆ, ಅವು ಒಳನುಸುಳದಂತೆ. ಅಮ್ಮ ನಿನ್ನ ನಾಮವೊಂದೆ ಆಧಾರ, ಶರಣು. ಅಮ್ಮ, ನಿನಗೆ ಶರಣಾಗಬೇಕು ಅಂದರೆ ಎಷ್ಟೊಂದು ಶುಚಿ ನಾನಾಗಬೇಕು. ನನ್ನಿಂದಾಗಿ ನಿನ್ನತ್ತ ಯಾರೂ ಬೊಟ್ಟು ಮಾಡಿ ತೋರಿಸಬಾರದಲ್ಲವೆ?

ಆಯುಸ್ಸು, ದಿನಗಳು ಕಳೆದು ಹೋಗುತ್ತಿವೆ. ಜೀರ್ಣ ಶೀರ್ಣ ಶರೀರ ಒಂದು ದಿನ ಬಿದ್ದು ಹೋಗುವುದು. ಶಕ್ತಿಗುಂದುವುದು. ಹಾಗಾಗುವ ಮೊದಲು ನಾನು ನಿನ್ನ ಕೃಪೆ ಪಡೆಯಬೇಕು. ನಾನು ಮಾಡುತ್ತಿರುವ ಸಾಧನೆ ಎಷ್ಟೂ ಸಾಲದು. ಅದು ನಿನಗೂ ಗೊತ್ತು. ಅಣ್ಣನವರ ವಚನ ಎಷ್ಟು ಮಾರ್ಮಿಕ:

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ
ಮುನ್ನ ಪೂಜಿಸು ಕೂಡಲಸಂಗಮದೇವನ.

ಎಂಥ ಅದ್ಭುತ ಚಿತ್ರಣ ಇದು. ಸಾವಿಗೂ ಮುನ್ನ ನಾವು ದೇವರವರಾಗಬೇಕು. ಆದರೆ ಅದು ಎಷ್ಟು ಕಷ್ಟ, ಇಂದಿನ ವಿಕೃತ ಪ್ರಪಂಚದಲ್ಲಿ.

ಅಮ್ಮ! ಎಲ್ಲೆಲ್ಲೂ ನಿನ್ನನ್ನೇ ಕಾಣಬೇಕು. ನಿನ್ನ ಮಡಿಲೊಳೊರಗಿ ನಲ್ಜೋಗುಳವ ಕೇಳಲೆಂಬಾಸೆ. ನಿನ್ನ ಮಮತೆಯ ಸ್ಪರ್ಶ ಅನುಭವಿಸಬೇಕು. ಎಂಥ ಕನಸು ನನ್ನದು! ಸಿಗುದುದಕ್ಕೆ ಕೈಯ



ಚಾಚುವ ಹೆಬ್ಬಯಕೆ. ಆದರೆ ಕವಿವಾಣಿಯೊಂದು ನನ್ನ ಹೃದಯದಲ್ಲಿ ನಿರತ ಮಿಡಿಯುತ್ತಿದೆ:

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈಹಿಡಿದು ನಡೆಸೆನ್ನನು.
ಇರುಳು ಕತ್ತಲೆಯ ಗವಿ; ಮನೆ ದೂರ, ಕನಿಕರಿಸಿ
ಕೈಹಿಡಿದು ನಡೆಸೆನ್ನನು.
ಹೇಳೆ ನನ್ನಡಿಯಿಡಿಸು, ಬಲು ದೂರ ನೋಟವನು
ಕೇಳೆನೊಡನೆಯೆ ಸಾಕು, ನನಗೊಂದು ಹೆಜ್ಜೆ.

ಅಮ್ಮ, ನೀನು ಕೈಹಿಡಿದು ನಡೆಸುವ ಒಂದು ಹೆಜ್ಜೆ ಎಷ್ಟು ಅಮೂಲ್ಯ! ಅದು ಮುನ್ನಡೆಸುವ ದಾರಿದೀಪ. ಈ ತೀರದಿಂದ ಆ ಲೋಕಕ್ಕೆ ಕರೆದೊಯ್ಯುವ ದೋಣಿ. ಆದರೆ ಆ ಒಂದು ಹೆಜ್ಜೆಗಾಗಿ ಪರಿತಪಿಸುತ್ತಿರುವೆ.

ಎಂತೆಂಥ ಕಷ್ಟ ಸಂಕೋಲೆಗಳಿಂದ, ಪಾಪಗಳಿಂದ ರಕ್ಷಿಸಿರುವೆ, ನಮಗರಿವಾಗದಂತೆ. ಸದಾ ನಮ್ಮಿಂದ ತಪ್ಪುಗಳು ಘಟಿಸುತ್ತಲೇ ಇರುತ್ತವೆ; ನೀನು ರಕ್ಷಿಸುತ್ತಲೇ ಇರುವೆ.

'ನೂರುಸಲ ನೀನೆತ್ತಿ ನಿಲ್ಲಿಸಿದರೂ ಕೂಡ
ನೂರು ಸಲ ಬೀಳುವುದು ನಮ್ಮ ಪಾಡು.